

# ಲಾಲ್ ಸಲಾಂ ಫಿಡಲ್ ಕ್ಯಾಸ್ಟ್ರೊ

■ ದಿಲೀಪ

ಫಿಡಲ್ ಕ್ಯಾಸ್ಟ್ರೊ!

ಕ್ಯೂಬಾ ಎನ್ನುವ ಪುಟ್ಟ ದೇಶವೊಂದು, ಸಾಮ್ರಾಜ್ಯಶಾಹಿ ಅಮೆರಿಕದ ವಿರುದ್ಧ ಸೆಡ್ಡುಹೊಡೆದು ಬದುಕಿ ಉಳಿದದ್ದೇ ದೊಡ್ಡದೊಂದು ಸಾಹಸಗಾಥೆ. ಆ ಸಾಹಸಗಾಥೆಯ ಕೇಂದ್ರಬಿಂದು ಫಿಡಲ್ ಕ್ಯಾಸ್ಟ್ರೊ. ಕ್ಯೂಬಾ ಕೇವಲ ಬದುಕಿ ಉಳಿದದ್ದಲ್ಲ; ಪುಟ್ಟ ದೇಶವೊಂದು ಸ್ವಾಭಿಮಾನದಿಂದ ಹೇಗೆ ಬದುಕಬಹುದು ಎನ್ನುವುದನ್ನೂ ಜಗತ್ತಿಗೆ ತೋರಿಸಿಕೊಟ್ಟಿತು. ಅದಕ್ಕೆ ಕಾರಣ ಕ್ಯಾಸ್ಟ್ರೊ.

ಕೆಲವೇ ಕೆಲವು ಸಂಗಾತಿಗಳನ್ನು ಕಟ್ಟಿಕೊಂಡು ಸಾಮ್ರಾಜ್ಯಷಾಹಿತ್ವವನ್ನು ಮಣಿಸಿದ ಧೀಮಂತ ನಾಯಕ ಫೀಡಲ್ ಕ್ಯಾಸ್ಟ್ರೊ. ಕ್ಯೂಬಾದಲ್ಲಿ ಅಮೆರಿಕ ಕುಮ್ಮಕ್ಕಿನಿಂದ ಸರ್ವಾಧಿಕಾರ ನಡೆಸುತ್ತಿದ್ದ ಬಟಿಸ್ಟಾ ಸರ್ಕಾರ ಕಿತ್ತೊಗೆದು 1959ರಲ್ಲಿ ಹೊಸ ಸರ್ಕಾರವನ್ನೇ ರಚಿಸಿ ಪ್ರಧಾನಿಯಾದರು. ಹಾಗೆ ಕಂಡ ಯಶಸ್ಸಿಗೆ ಸ್ಪಷ್ಟ ರೂಪ ಕೊಡುವುದಕ್ಕೆ ಅವರು ಶ್ರಮಿಸಿದ ರೀತಿಯೂ ಅದ್ಭುತ.

ಫಿಡೆಲ್ ಕ್ಯಾಸ್ಟ್ರೊ ಕ್ಯೂಬಾ ಅಧ್ಯಕ್ಷರಾಗುವುದರ ಜತೆಗೆ ಜಾಗತಿಕ ಅಲಿಪ್ತ ಚಳವಳಿಯ ಅಧ್ಯಕ್ಷರಾಗಿಯೂ 1982ರವರೆಗೆ ಕಾರ್ಯ ನಿರ್ವಹಿಸಿದರು. ಭಾರತದಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರ ಜತೆಗೆ ಕ್ಯಾಸ್ಟ್ರೋ ಅವರಿಗೆ ವಿಶೇಷ ಸ್ನೇಹ ಸಂಬಂಧವಿತ್ತು. ಅಮೆರಿಕಾ ಮತ್ತು ಯುಎಸ್ಎಸ್ಆರ್ ಎಂಬ ಎರಡು ದೈತ್ಯಶಕ್ತಿಗಳ ನಡುವೆ ತಮ್ಮದೇ ಆದ ಜಾಗತಿಕ ಗುಂಪೊಂದನ್ನು ಕಟ್ಟಿಕೊಂಡ ಅಲಿಪ್ತ ದೇಶಗಳಿಗೆ ಆಸರೆಯಾದ ಕೀರ್ತಿ ಕ್ಯಾಸ್ಟ್ರೊ ಅವರದ್ದು.

ಕ್ಯಾಸ್ಟ್ರೊ ಆಡಳಿತದಲ್ಲಿ ಕ್ಯೂಬಾದ ಸಾಕ್ಷರತೆ ಪ್ರಮಾಣ ಶೇಕಡಾ 98ಕ್ಕೆ ಏರಿತು. ದೇಶದಾದ್ಯಂತ ಸಾವಿರಾರು ಶಾಲೆಗಳನ್ನು ತೆರೆಯಲಾಯಿತು. ಅದುವರೆಗೆ ಹೆಚ್ಚಿನ ಪ್ರಮಾಣದಲ್ಲಿದ್ದ ಶಿಶುಮರಣವೂ ಶೇಕಡಾ 1.1ಕ್ಕೆ ಇಳಿಯಿತು. ನಿರಂತರ 59 ವರ್ಷಗಳ ಕಾಲ ದೇಶವನ್ನು ಪ್ರಧಾನಿ ಮತ್ತು ಮಿಲಿಟರಿ ಮುಖ್ಯಸ್ಥರಾಗಿ ಆಳಿದ ಕೀರ್ತಿ ಕ್ಯಾಸ್ಟ್ರೊ ಅವರದ್ದು. ಏಕಪಕ್ಷದ ಸಮಾಜವಾದಿ ಆಡಳಿತವದು. ಅಲ್ಲಿ ಬೇರೆ ಪಕ್ಷಗಳಿಗೆ ಅವಕಾಶವೇ ಇರಲಿಲ್ಲ. ಆದರೆ ಹೀಗೆ ಉಂಟಾದ ಕಮ್ಯುನಿಸ್ಟ್ ಏಕಚಕ್ರಾಧಿಪತ್ಯದ ಅಡಿಯಲ್ಲಿ ಪತ್ರಿಕಾ ಸ್ವಾತಂತ್ರ್ಯ ನರಳಿತು. ಟೀಕೆ ಮಾಡಿದ ಪತ್ರಿಕೆಗಳು, ಪತ್ರಕರ್ತರು ಕಣ್ಮರೆಯಾದರು. ಕಾರ್ಮಿಕ ಸಂಘಟನೆಗಳ ಮುಷ್ಕರದ ಹಕ್ಕನ್ನು ಕಿತ್ತುಕೊಳ್ಳಲಾಯಿತು. ರಾಜಕೀಯ ವಿರೋಧಿಗಳು ಇಲ್ಲವಾದರು. ಯಾರೇ ವಿರೋಧಿಸಿದರೂ ಒಂದೋ ದೇಶಭ್ರಷ್ಟತೆ ಅಥವಾ ಮರಣದಂಡನೆ! 1980ರಲ್ಲಿ ಕ್ಯೂಬಾ ಪ್ರಜೆಗಳು ಅಮೆರಿಕಕ್ಕೆ ವಲಸೆ ಹೋಗಬಹುದು ಎನ್ನುವ ಕಾನೂನು ಬರುವವರೆಗೆ ಕ್ಯೂಬಾದಲ್ಲಿ ಮಾನವ ಹಕ್ಕುಗಳ ಸೊಲ್ಲಡಗಿತು.

ಅಮೆರಿಕವೂ ಸುಮ್ಮನೆ ಕೂರಲಿಲ್ಲ. ಕ್ಯೂಬಾ ಜನರ ಮಾನವ ಹಕ್ಕುಗಳ ಸಂರಕ್ಷಣೆಯ ನೆಪದಲ್ಲಿ ಫಿಡಲ್ ಕ್ಯಾಸ್ಟ್ರೋ ಸರಕಾರವನ್ನು ಕಿತ್ತೊಗೆಯಲು ಯತ್ನಿಸಿತು. ಕ್ಯಾಸ್ಟ್ರೊ ಅವರನ್ನು ಕೊಲ್ಲಲು ಸಿಐಎ ಸಂಚು ಹೂಡಿತು. ಕ್ಯಾಸ್ಟ್ರೊ ಅವರ ರಕ್ಷಣಾಧಿಕಾರಿಯ ಪ್ರಕಾರ, ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಕ್ಯಾಸ್ಟ್ರೊ ಅವರನ್ನು ಕೊಲ್ಲಲು ಒಟ್ಟು 638 ವಿಫಲ ಯತ್ನಗಳನ್ನು ನಡೆಸಿತ್ತು!

ಸಿಐಎ ನಡೆಸಿದ ಹತ್ಯೆ ಯತ್ನಗಳನ್ನು ಕುರಿತೇ ಹತ್ತಾರು ಪುಸ್ತಕಗಳು ಪ್ರಕಟವಾಗಿವೆ. ಒಮ್ಮೆ ಕ್ಯಾಸ್ಟ್ರೊ ಅವರಿಗೆ ವಿಷ ತುಂಬಿದ ಸಿಗಾರ್‌ಗಳನ್ನು ಕಾಣಿಕೆಯಾಗಿ ಕಳುಹಿಸಿಕೊಡಲಾಗಿತ್ತು. ನೀರಿನಾಳದಲ್ಲಿ ಮೀನು ಹಿಡಿಯುವ ಹವ್ಯಾಸವಿದ್ದ ಕ್ಯಾಸ್ಟ್ರೊ ಅವರನ್ನು ಇನ್ನೊಮ್ಮೆ ಕಪ್ಪೆಚಿಪ್ಪಿನಲ್ಲಿ ಸ್ಫೋಟ ನಡೆಸುವ ಸಂಚು ವಿಫಲಗೊಂಡಿತು. ವಿಷದ ಸಿರಿಂಜ್ ಅಳವಡಿಸಿದ ಬಾಲ್‌ಪೆನ್ ಕಳುಹಿಸಿಕೊಟ್ಟರೂ ಪ್ರಯತ್ನ ಕೈಗೂಡಲಿಲ್ಲ. ಮಗುದೊಮ್ಮೆ ಅರ್ನೆಸ್ಟ್ ಹೆಮಿಂಗ್ವೇ ಮ್ಯೂಸಿಯಂಗೆ ಭೇಟಿ ಕೊಟ್ಟಿದ್ದ ಕ್ಯಾಸ್ಟ್ರೊ ಮೇಲೆ ಮಾಫಿಯಾ ಮಾದರಿಯಲ್ಲಿ ಬಾಂಬ್ ದಾಳಿ ನಡೆಯಿತು. ವಿಶ್ವಸಂಸ್ಥೆಗೆ ಭೇಟಿ ನೀಡಿದ್ದಾಗ ಬೂಟಿನೊಳಗೆ ಕೆಮಿಕಲ್ ಹರಡಿ ದೇಹಕ್ಕೆ ವಿಷ ಹರಡಿಸಲು ಯತ್ನಿಸಲಾಯಿತು. ಬೇಸ್‌ಬಾಲ್ ಸ್ಟೇಡಿಯಂನಲ್ಲಿ ಬಾಂಬ್ ಸ್ಫೋಟಿಸಿ ಕೊಲ್ಲುವ ಯತ್ನವೂ ವಿಫಲವಾಯಿತು.

ಕ್ಯಾಸ್ಟ್ರೊ ಕೊಲೆ ಯತ್ನಕ್ಕೆ ಅವರ ಮಾಜಿ ಪತ್ನಿಯನ್ನೂ ಸಿಐಎ ಬಳಸಿಕೊಂಡದ್ದು ಕುತೂಹಲಕರ. ಪತ್ನಿ ಮಂಟಾ ಲಾರೆನ್ಸ್ ಗರ್ಭಿಣಿಯಾದಾಗ ಅಮೆರಿಕಕ್ಕೆ ಭೇಟಿ ನೀಡಿದ್ದಳು. ಅಲ್ಲಿ ಆಕೆಯನ್ನು ಗುಪ್ತವಾಗಿ ಮನವೊಲಿಸಿದ ಸಿಐಎ ಅಧಿಕಾರಿಗಳು ವಿಷಪೂರಿತ ಗುಳಿಗೆಯನ್ನು ಡ್ರಿಂಕ್ಸ್‌ನಲ್ಲಿ ಬೆರೆಸುವಂತೆ ಸಲಹೆ ನೀಡಿ ಕಳಿಸಿದರು. ತನ್ನ ಕೋಲ್ಡ್ ಕ್ರೀಮ್ ಭರಣಿಯಲ್ಲಿ ಆ ಗುಳಿಗೆಯನ್ನು ತಂದ ಆಕೆ ಗಂಡನೆದುರು ಸಿಕ್ಕಿಬಿದ್ದಳು. ಆಕೆಯ ಕೈಗೆ ಪಿಸ್ತೂಲ್ ಕೊಟ್ಟ ಕ್ಯಾಸ್ಟ್ರೊ ತಮ್ಮ ಮೇಲೆ ಗುಂಡು ಹಾರಿಸು ಎಂದರು. ಆದರೆ ಗಂಡನನ್ನು ಕೊಲ್ಲಲು ಮನಸ್ಸು ಒಪ್ಪದೆ ಆಕೆ ಕುಸಿದು ಕುಳಿತಳು. ಹೀಗೊಂದು ಕೊಲೆಯ ರಹಸ್ಯವೂ